## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ

ಸಿಸಿ.421/2014

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಆಂಜಿನಪ್ಪ | ಸಿಡಬ್ಲೂಃ **03** |
| ತಂದೆ ಹೆಸರು ಃ | | ಮುನಿಯಪ್ಪ | ಪಿಡಬ್ಲೂಃ **08** |
| ವಯಸ್ಸು | ಃ | 65 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ವ್ಯವಸಾಯ | 31.07.2026 |
| ವಾಸ ಸ್ಥಳ | ಃ | ಅತ್ತಿಗಾನಹಳ್ಳಿ ಗ್ರಾಮ ಶಿಡ್ಲಘಟ್ಟ ತಾಲ್ಲೂಕು. | |

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>
<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ</u>

ನ್ಯಾಯಾಲಯದ ಮಂದಿರುವ ಆರೋಪಿಗಳು ಗೊತ್ತು. ಚಾಸಾ-**1** ನನಗೆ ಪರಿಚಯ.

**2.** ದಿನಾಂಕ **05.02.2014** ರಂದು ನಾನು ಚೀಮಂಗಲ ಬ್ಯಾಂಕಿನ ಹತ್ತಿರ ಹೋಗಿದ್ದಾಗ, ಬ್ಯಾಂಕ್ ಪಕ್ಕದಲ್ಲಿ ಚಾಸಾ-**1** ರವರ ಅಂಗಡಿ ಇದ್ದು, ಸದರಿ ಅಂಗಡಿ ಬಳಿ ಅಂಗಡಿ ಕಟ್ಟಬಾರದು ಎಂದು ಆರೋಪಿಗಳು ಚಾಸಾ-**1** ರವರೊಂದಿಗೆ ಜಗಳ ಮಾಡುತ್ತಿದ್ದರು. ಆಗ ಚಾಸಾ-**1** ರವರು ನನ್ನ ಜಾಗದಲ್ಲಿ ನಾನು ಅಂಗಡಿ ಕಟ್ಟಿಕೊಳ್ಳುತ್ತೇನೆ ಎಂದು ಹೇಳಿದರು. ಆಗ **1** ನೇ ಆರೋಪಿ ಮು.ಮಾ-**1** ರಿಂದ ಚಾಸಾ-**1** ರವರ ಬಲಗೈಗೆ ಹೊಡೆದರು. **2** ನೇ ಆರೋಪಿ ಚಾಸಾ-**1** ರವರ ಸೊಂಟಕ್ಕೆ ಕಾಲಿನಿಂದ ಒದ್ದರು. ಅಷ್ಟರಲ್ಲಿ ಚಾಸಾ-**1** ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು.

**3.** ಸಾಕ್ಷಿಗೆ ನಿಪಿ-**2** ಸ್ಥಳ ಪಂಚನಾಮೆಯನ್ನು ತೋರಿಸಲಾಗಿ, ಅದಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿ.ಪಿ.**2**(ಸಿ) ಎಂದು ಗುರುತಿಸಲಾಯಿತು. ನಿಪಿ-**2** ಕ್ಕೆ ದಿನಾಂಕ **06.02.2014** ರಂದು ಪೋಲಿಸರು ಅಂಗಡಿ ಬಳಿ ಸ್ಥಳ ಪಂಚನಾಮೆಗೆ ಮದ್ಯಾಹ್ನ **1.30** ರಿಂದ **2.00** ಗಂಟೆ ಸಮಯದಲ್ಲಿ ಸಹಿಯನ್ನು ಮಾಡಿರುತ್ತೇನೆ. ನಿಪಿ-**2** ರ ಕಾಲಕ್ಕೆ ಮು.ಮಾ-**1** ನ್ನು ಅಮಾನತ್ತುಪಡಿಸಿಕೊಂಡರು. ನಿಪಿ-**2** ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತು. ನಾನು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ.

(ಸಾಕ್ಷಿಯು ಅಭಿಯೋಜನೆ ಪ್ರಕರಣಕ್ಕೆ ಭಾಗತಃ ವ್ಯತಿರಿಕ್ತ ಸಾಕ್ಷ್ಯ ನುಡಿದಿದ್ದರಿಂದ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ</u>

ಆರೋಪಿಗಳು ಚಾಸಾ-1 ರವರಿಗೆ ಒದ್ದ ನಂತರ ಅವಾಚ್ಯ ಶಬ್ಧಗಳಿಂದ ಬೈದು, ಇಲ್ಲಿ ಅಂಗಡಿ ನಿರ್ಮಿಸಿದರೆ ಪ್ರಾಣಾ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿ.

ಪಾಟಿ ಸವಾಲುಃ ಆರೋಪಿಗಳ ಪರ ಶ್ರೀ ಸಿ ಜಿ ಬಿ ವಕೀಲರಿಂದಃ

ನನಗೆ ಚಾಸಾ-1 ರವರು ಈಗ ಸುಮಾರು 7-8 ವರ್ಷಗಳಿಂದ ಪರಿಚಯ ಇರುತ್ತಾರೆ. ಗಲಾಟೆಯಾಯಿತು ಎಂದು ಹೇಳುವ ಸಮಯಕ್ಕೆ ಚಾಸಾ-1 ರವರ ಪರಿಚಯ ನನಗೆ ಇರಲಿಲ್ಲ. ಚಾಸಾ-1 ರವರಿಗೆ ಸಂಬಂಧಿಸಿದ ಸಿವಿಲ್ ದಾವೆಗಳಲ್ಲಿ ನಾನು ಸಾಕ್ಷಿದಾರನಾಗಿ ಮತ್ತು ನಾನು ದಾಖಲಿಸಿರುವ ಸಿವಿಲ್ ದಾವೆಗಳಲ್ಲಿ ಚಾಸಾ-1 ರವರು ಪರಸ್ಪರ ಸಾಕ್ಷಿದಾರನಾಗಿ ಸಾಕ್ಷ್ಯ ನುಡಿದಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಗ್ರಾಮಕ್ಕೂ ಮತ್ತು ಚೇಮಂಗಲ ಗ್ರಾಮಕ್ಕೂ 2 ಕಿ.ಮೀ. ಅಂತರ ಎಂದರೆ ಸರಿ. ನಾನು ಮನೆಗೆ ಏನಾದರೂ ಖರೀದಿಸಲು ಚಾಸಾ-1 ರವರ ಅಂಗಡಿಗೆ ಹೋಗುತ್ತೇನೆ ಎಂದರೆ ಸರಿಯಲ್ಲ.

**2.** ನಾನು ಆ ದಿನ ಮಧ್ಯಾಹ್ನ 3.00 ಗಂಟೆಗೆ ಹಾಲಿನ ಹಣವನ್ನು ತೆಗೆದುಕೊಳ್ಳಲು ಬ್ಯಾಂಕಿಗೆ ಬಂದಿದ್ದೆ. ಆ ದಿನ ಹಣವನ್ನು ಬ್ಯಾಂಕಿನಿಂದ ನಾನು ಪಡೆದುಕೊಂಡಿರುತ್ತೇನೆ. ಚೇಮಂಗಲ ಬ್ಯಾಂಕಿನಲ್ಲಿ ಮಧ್ಯಾಹ್ನ 2.00 ಗಂಟೆಯ ನಂತರ ಹಣವನ್ನು ಗ್ರಾಹಕರಿಗೆ ನೀಡುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ಗಲಾಟೆಯು ಆ ದಿನ ಸಂಜೆ 4.30 ಗಂಟೆಗೆ ಆಗಿರುತ್ತದೆ. ಆಗ ನಾನು ಬ್ಯಾಂಕ್ ಮುಂಭಾಗ ಇದ್ದೆನು. ನಾನು ಹಣ ಪಡೆಯಲು ಹೋಗಿದ್ದ ಗ್ರಾಮೀಣ ಕೃಷ್ಣ ಬ್ಯಾಂಕ್ ಚಾಸಾ-1 ರವರ ಅಂಗಡಿಯ ಪಕ್ಕದಲ್ಲಿ ಇರುತ್ತದೆ.

**3.** ನಾನು ಬ್ಯಾಂಕಿನಲ್ಲಿ ಹಣ ಪಡೆಯಲು ಹೋಗಿದ್ದೆ ಎಂದು ತನಿಖಾಧಿಕಾರಿಯವರ ಮುಂದೆ ಹೇಳಿಲ್ಲ. ಸದರಿ ಟೀ ಅಂಗಡಿ ಆಗಿರುತ್ತದೆ. ಸದರಿ ಟೀ ಅಂಗಡಿಯನ್ನು ಚಾಸಾ-1 ರವರು ಎಷ್ಟು ವರ್ಷದಿಂದ ನಡೆಸುತ್ತಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಟೀ ಅಂಗಡಿಯನ್ನು ಗಲಾಟೆಯಾದ ನಂತರ ಅಂದರೆ 2015 ನೇ ಇಸವಿಯ ನಂತರ ನಿರ್ಮಿಸಲಾಗಿದೆ ಎಂದರೆ ಸರಿಯಲ್ಲ. ಗಲಾಟೆ ನಡೆಯುತ್ತಿತ್ತು ಎಂದು ಹೇಳುವ ಸ್ಥಳದಲ್ಲಿ ಹಲವಾರು ಜನರು ಹಾಜರು ಇದ್ದರು, ಅವರ ಹೆಸರು ನನಗೆ ಹೇಳಲು ಸಾಧ್ಯವಾಗುವುದಿಲ್ಲ. 2 ನೇ ಆರೋಪಿಗೆ 2014 ನೇ ಸಾಲಿನಲ್ಲಿ 68 ವರ್ಷ ವಯಸ್ಸು ಮತ್ತು ಚಾಸಾ-1 ರವರಿಗೆ 30 ವರ್ಷ ವಯಸ್ಸು ಎಂದರೆ ಇರಬಹುದು ಎಂದು ನುಡಿಯುತ್ತಾರೆ. 2 ನೇ ಆರೋಪಿ ನಾನು ಹೇಳುವಂತೆ ಚಾಸಾ-1 ರವರಿಗೆ ಹೊಡೆಯಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ-1 ರವರಿಗೆ ಹೊಡೆಯುತ್ತಿದ್ದರು ಎಂದು ಹೇಳುವಾಗ, ಚಾಸಾ-1 ರವರು ಸುಮ್ಮನೆ ನಿಂತಿದ್ದರು. ಚಾಸಾ-1 ರವರನ್ನು ಅವರ ಗ್ರಾಮದವರು ಆಸ್ಪತ್ರೆಗೆ ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ಹೋಗಿರುತ್ತಾರೆ ನಾನು ಕರೆದುಕೊಂಡು ಹೋಗಿರುವುದಿಲ್ಲ. ಚಾಸಾ-1 ರವರನ್ನು ಇಬ್ಬರು ದ್ವಿಚಕ್ರ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅವರ ಹೆಸರುಗಳು ಹೇಳಲು ನನಗೆ ಆಗುವುದಿಲ್ಲ. ನಾನು ಘಟನಾ ಸ್ಥಳದಲ್ಲಿ ಇಲ್ಲದೇ ಇದ್ದುದರಿಂದ ಯಾರು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ನಾನು ಹೇಳುತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ರೀತಿ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ.

**4.** ನಾನು ಹೇಳುವಂತೆ ಯಾವುದೇ ಬ್ಯಾಂಕಿಗೆ ಹೋಗದೇ ಇದ್ದರೂ ಮತ್ತು ಗಲಾಟೆಯನ್ನು ನೋಡದೇ ಇದ್ದರೂ ಸಹ ಚಾಸಾ-1 ರವರು ನನಗೆ ಪರಿಚಯಸ್ಥರಾಗಿರುವುದರಿಂದ ಮತ್ತು ನನ್ನ ಸಿವಿಲ್ ದಾವೆಗಳಲ್ಲಿ ಅವರು ಸಾಕ್ಷಿದಾರರಾಗಿ ಸಾಕ್ಷ್ಯ ನುಡಿಯುವುದರಿಂದ ಚಾಸಾ-1 ರವರಿಗೆ ಸಹಾಯ ಮಾಡಲು ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**5.** 2 ನೇ ಆರೋಪಿ ಚಾಸಾ-1 ರವರ ಮೇಲೆ 3-4 ದೂರನ್ನು ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು ನನ್ನ ದಾವೆ ಇದ್ದಾಗ ನ್ಯಾಯಾಲಯಕ್ಕೆ ಬರುತ್ತೇನೆ. ಸದರಿ ದಾವೆಯನ್ನು ನಾಗರಾಜ್ ವಕೀಲರು ನಡೆಸುತ್ತಾರೆ. ಚಾಸಾ-1 ರವರ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಸದರಿ ನಾಗರಾಜ್ ವಕೀಲರೇ ನಡೆಸುತ್ತಾರೆ ಎಂದರೆ ಸರಿ. ಚೀಮಂಗಲ ಗ್ರಾಮದ ನಾರಾಯಣಸ್ವಾಮಿರವರ ಪರಿಚಯ ನನಗೆ ಇರುತ್ತದೆ. ನಾರಾಯಣಸ್ವಾಮಿರವರು ಸಹ ಚಾಸಾ-1 ರವರ ಪ್ರಕರಣಗಳಲ್ಲಿ ಸಾಕ್ಷಿದಾರರಾಗಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು ಮತ್ತು ನಾರಾಯಣಸ್ವಾಮಿರವರು ನ್ಯಾಯಾಲಯಕ್ಕೆ ಒಟ್ಟಿಗೆ ಬರುತ್ತೇವೆ ಎಂದರೆ ಸರಿಯಲ್ಲ.

**6.** ಮು.ಮಾ-1 ರಂತಹ ಕಲ್ಲು ಸಾಮಾನ್ಯವಾಗಿ ಎಲ್ಲರ ಗ್ರಾಮಗಳಲ್ಲಿ ಲಭ್ಯವಾಗುತ್ತದೆ ಎಂದರೆ ಸರಿ. ಮು.ಮಾ-1 ಕಲ್ಲು ಅಂಗಡಿ ಮುಂಭಾಗ ಇದ್ದು, ಅದನ್ನು ಚಾಸಾ-1 ರವರು ಪೋಲಿಸರಿಗೆ ಕೊಟ್ಟರು. ಚಾಸಾ-1 ರವರು ಪೋಲಿಸರ ಜೊತೆ ಇದ್ದರು. ಗಲಾಟೆ ಆಯಿತು ಎಂದು ಹೇಳುವ ಸ್ಥಳವನ್ನು ಚಾಸಾ-1 ರವರು ಪೋಲಿಸರಿಗೆ ತೋರಿಸಿರುತ್ತಾರೆ. ಪೋಲಿಸರು ಬಂದ ನಂತರ ಗಲಾಟೆಯಾದ ಸ್ಥಳಕ್ಕೆ ಬರಬೇಕೆಂದು ಚಾಸಾ-1 ರವರು ನನಗೆ ದೂರವಾಣಿ ಕರೆ ಮಾಡಿ ಕರೆದಿರುತ್ತಾರೆ. ಚಾಸಾ-1 ರವರು ಕರೆ ಮಾಡಿದ 15 ನಿಮಿಷದಲ್ಲಿ ನಾನು ಪಂಚನಾಮೆ ಸ್ಥಳಕ್ಕೆ ಬಂದಿರುತ್ತೇನೆ. ನಾನು ಬಂದಾಗ ಪೋಲಿಸರು ಚಾಸಾ-1 ರವರ ಅಂಗಡಿ ಮುಂಭಾಗ ಇದ್ದರು. ನಾನು ಸ್ಥಳಕ್ಕೆ ಬರುವಷ್ಟರಲ್ಲಿ ಪೋಲಿಸರು ನಿಪಿ-2 ನ್ನು ಬರೆಯುತ್ತಿದ್ದರು. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ನಿಪಿ-2 ಕ್ಕೆ ಪಂಚನಾಮೆ ಸಾಕ್ಷಿದಾರರು ಸಹಿ ಮಾಡಿ ಹೊರಟು ಹೋಗಿದ್ದರು. ನಿಪಿ-2 ಕ್ಕೆ ಸಾಕ್ಷಿದಾರರಾಗಿ ಇತರೆ ಯಾರು ಸಹಿ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ.

**7.** ನಿಪಿ-2 ರಲ್ಲಿ ಬರೆದಿರುವ ಸಂಗತಿಗಳನ್ನು ಪೋಲಿಸರು ಓದಿ ಹೇಳಿದ್ದು, ಹಲವಾರು ವರ್ಷಗಳಾಗಿರುವುದರಿಂದ ನಿಪಿ-2 ರಲ್ಲಿ ಬರೆದಿರುವ ಸಂಗತಿಗಳು ಈಗ ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲಿಸ್ ಠಾಣೆಯಲ್ಲಿ ಪೋಲಿಸರಿಗೆ ಹೇಳಿಕೆ ನೀಡಿಲ್ಲ. ನಾನು ಯಾವುದೇ ಗಲಾಟೆಯನ್ನು ನೋಡದೇ ಇದ್ದರೂ ಮತ್ತು ನಿಪಿ-2 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದರೂ ಸಹ, ಚಾಸಾ-1, ನಾರಾಯಣಸ್ವಾಮಿ ಮತ್ತು ನಾನು ಸ್ನೇಹಿತರಾದ ಕಾರಣ ಚಾಸಾ-1 ರವರಿಗೆ ಸಹಾಯ ಮಾಡು, ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿಗಳು ವಿಶ್ವಾಸದಿಂದ ಇಲ್ಲದೇ ಇರುವುದರಿಂದ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.